# ಬೆಂಗಳೂರಿನಲ್ಲಿ ಜಲಾನಯನ ಅಭಿವೃದ್ಧಿ ವೀಕ್ಷಣೆ ಹಾಗೂ ವಿಶ್ಲೇಷಣೆ ಕುರಿತಂತೆ ಕಾರ್ಯಗಾರ

ಬೆಂಗಳೂರು :ನವೆಂಬರ್ 09,2005

ಇಸ್ರೋ ಸಂಸ್ಥೆ ಅಂತರಿಕ್ಷ ನಿಗಮ ಹಾಗೂ ಕರ್ನಾಟಕ ಸರ್ಕಾರದ ಜಲಾನಯನ ಅಭಿವೃದ್ಧಿ ಇಲಾಖೆಯೊಂದಿಗೆ ಒಟ್ಟುಗೂಡಿ ಒಂದು ದಿವಸದ ಕಾರ್ಯಗಾರವನ್ನು ಇಂದು ಅಂತರಿಕ್ಷ ಭವನದಲ್ಲಿ ಏರ್ಪಡಿಸಿದ್ದವು . ಇಸ್ರೊ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ ಮಾಧವನ್ ನಾಯರ್ ಕಾರ್ಯಗಾರದ ಉದ್ಘಾಟನೆ ನೆರವೇರಿಸಿದರು . ವಿಶ್ವ ಬ್ಯಾಂಕ್ ತಜ್ಞರಾದ ಡಾ.ದುನು ರಾಯ್ ಮುಖ್ಯ ಅಥಿತಿಯಾಗಿದ್ದರು ಹಾಗೂ ಕರ್ನಾಟಕ ಸರ್ಕಾರದ ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎ. ರಾಮಸ್ವಾಮಿ ಅಧ್ಯಕ್ಷತೆ ವಹಿಸಿದ್ದರು . ಡಬ್ಲ್ಯೂ ಡಿ ಡಿ ಆಯುಕ್ತರಾದ ಶ್ರೀ ಎಚ್ ಸಿ . ಮುನಿಯಪ್ಪ ಹಾಗೂ ಎಂ ಮತ್ತು ಇ ಯೋಜನಾ ನಿರ್ದೇಶಕರಾದ ಡಾ . ಬಿ ಕೆ ರಂಗನಾಥ್ ಭಾಗವಹಿಸಿದ್ದರು . ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಸುಜಲ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಕರ್ನಾಟಕದಲ್ಲಿ 2001ನೇ ಇಸವಿಯಲ್ಲಿ ಆರಂಭಿಸಿರುವುದನ್ನು ಇಲ್ಲಿ ಸ್ಮರಿಸಬಹುದು . 675 ಕೋಟಿ ರೂಪಾಯಿಗಳ ಈ ಯೋಜನೆ ಕೋಲಾರ, ತುಮಕೂರು , ಚಿತ್ರದುರ್ಗ,ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳ 77 ಉಪ ಜಲಾನಯನ ಪ್ರದೇಶಗಳನ್ನು ಹಾಗೂ 747 ಕಿರು ಜಲಾನಯನ ಪ್ರದೇಶದ ಅಭಿವೃದ್ಧಿಯನ್ನೊಳಗೊಂಡಿದೆ . 5. 11 ಲಕ್ಷ ಹೆಕ್ಟೇರ್ ಪ್ರದೇಶದ ವ್ಯಾಪ್ತಿಯುಳ್ಳ ಈ ಯೋಜನೆ 4 ಲಕ್ಷ ಕುಟುಂಬಗಳಿಗೆ ಫಲಕಾರಿ ಎನಿಸಲಿದೆ . ಇವರೆಗು 80 ಸಣ್ಣ ಜಲಾನಯನ ಪ್ರದೇಶಗಳಲ್ಲಿ ಕಾರ್ಯ ಮುಗಿದಿದ್ದು 184 ಸಣ್ಣ ಜಲಾನಯನ ಪ್ರದೇಶದಲ್ಲಿ ಕಾರ್ಯ ಪ್ರಗತಿಯಲ್ಲಿದೆ . ಅನ್ಯ 473 ಸಣ್ಣ ಜಲಾನಯನ ಪ್ರದೇಶಗಳ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ . ಭಾರತೀಯ ದೂರಸಂವೇದಿ ಉಪಗ್ರಹಗಳು ನೀಡುವ ದಾಖಲೆ ಹಾಗೂ ಸಾಂಪ್ರದಾಯಿಕ ಭೂ ದಾಖಲೆಗಳನ್ನು ಬಳಸುತ್ತ ಸುಜಲ ಜಲಾನಯನ ಅನಿವೃದ್ಧಿ ಯೋಜನೆಯ ವೀಕ್ಷಣೆ ಹಾಗೂ ವಿಶ್ವೇಷಣೆಯನ್ನು ಬಾಹ್ಯಾಕಾಶ ಇಲಾಖೆ ನೆರವೇರಿಸುತ್ತಿದೆ . ಇಸ್ರೋ ಹಾಗೂ ಅಂತರಿಕ್ಷ ಸಂಸ್ಥೆಗಳು ಅನುಸರಿಸುತ್ತಿರುವ ವಿಧಾನಗಳ ಕುರಿತು ವಿಶ್ವ ಬ್ಯಾಂಕ್ ತನ್ನ ಮೆಚ್ಚುಗೆ ವ್ಯಕ್ತಪಡಿಸಿದೆ .

ಸುಜಲ ಜಲಾನಯನ ಅಭಿವೃದ್ಧಿ ಯೋಜನೆಯ ವೀಕ್ಷಣೆ ಹಾಗೂ ವಿಶ್ಲೇಷಣೆಗಾಗಿ ಬಳಸಲಾಗುತ್ತಿರುವ ನವೀನ ವಿಧಾನಗಳು ಹಾಗೂ ಉತ್ತಮ ಆಚರಣೆಗಳ ಕುರಿತು ಮಾಹಿತಿ ನೀಡುವುದೆ ಈ ಕಾರ್ಯಗಾರರ ಮುಖ್ಯ ಉದ್ದೇಶವಾಗಿತ್ತು . ಇಂತಹ ಅನ್ಯ ಯೋಜನೆಗಳಿಂದ ದೊರೆತ ಅನುಭವಗಳ ವಿನಿಮಯ ಕಾರ್ಯವನ್ನು ಸಹ ಈ ಸಂದರ್ಭದಲ್ಲಿ ನೆರವೇರಿಸಲಾಯಿತು . ಕೃಷಿ ಹಾಗೂ ಸಹಕಾರ ಸಚಿವಾಲಯ , ಗ್ರಾಮೀಣಾಭಿವೃದ್ಧಿ ಸಚಿವಾಲಯ , ನಬಾರ್ಡ್, ಕರ್ನಾಟಕದ ವಿಶ್ವ ಬ್ಯಾಂಕ್ ಯೋಜನೆಗಳು , ರಾಷ್ಟ್ರೀಯ ಅರಣ್ಯೀಕರಣ ಹಾಗೂ ಪರಿಸರ ಅಭಿವೃದ್ಧಿ ಮಂಡಳಿ , ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯಗಳಿಂದ ಬಂದ ಪ್ರತಿನಿಧಿಗಳು , ವಿಶ್ವ ಬ್ಯಾಂಕ್ ಸಲಹಗಾರರು , ಕೇಂದ್ರ

ಹಾಗೂ ರಾಜ್ಯ ಸರ್ಕಾರ ಇಲಾಖೆಗಳ ಮುಖ್ಯ ಅಧಿಕಾರಿಗಳು ಮತ್ತು ಕ್ಷೇತ್ರ ಕಾರ್ಯಕರ್ತರು ಮತ್ತು ಸರ್ಕಾರೇತರ ಸಂಸ್ಥೆಗಳ ನಿರ್ವಹಣಾಧಿಕಾರಿಗಳು ಈ ಕಾರ್ಯಗಾರದಲ್ಲಿ ಪಾಲ್ಗೊಂಡಿದ್ದರು .

******

ಅದ: ಪಚ:ಸು: ಆ:ಕ: ಬೆಂ:17:15 09–11–2005